## ಮೂಷಿಕ ನಮನ

ಗ್ರಾಮೀಣ ಪ್ರದೇಶದಲ್ಲಿ ಸುತ್ತಾಡುವಾಗ ಪ್ರಾಕೃತಿಕ ಸೌಂದರ್ಯ ಹಿತ ಅನುಭವವನ್ನು ನೀಡುತ್ತವೆ. ತೀಥಹಳ್ಳಿ ತಾಲ್ಲೂಕಿನ ತದೆ. ಹೆದ್ದೂರು ಗ್ರಾಮದ ಮುಖ್ಯ ರಸ್ತೆಯ ವೃತ್ತದಲ್ಲಿ ಕಲಾವಿದರೊಬ್ಬರು ಕಲ್ಲು ಮಂಟಪದ ಮೇಲೆ ಎದ್ದು ಕಾಣುವಂತೆ ಬಳಪದ ಶಿಲೆಯಲ್ಲಿ ನಿರ್ಮಿಸಿದ ವಿಘ್ನ ನಿವಾರಕ ಗಣಪತಿಯ ವಿಗ್ರಹ ಮನ ಸೆಳೆಯುವಂತಿದೆ. ಸಮೀಪದಲ್ಲಿ ವೃಕ್ಷದ ಕೊಂಬೆಯೊಂದು ಮೂಷಿಕನ ಅವತಾರ ತಾಳಿದ್ದು ಗಣಪನಿಗೆ ಭಕ್ತಿಭಾವದಿಂದ ಕೈ ಎತ್ತಿ ನಮಿಸುವಂತಿದೆ. ಗಣಪತಿಯ ವಾಹನ ಮೂಷಿಕವೆಂಬ ಹಿನ್ನೆಲೆ ವಿಗ್ರಹದ ಮುಂದೆ ವೃಕ್ಷದ ಕೊಂಬೆಯು ಮೂಷಿಕನ ಅವತಾರ ತಳೆದಿರುವುದು ಕಾಕತಾಳೀಯ?

—ಕೆ. ರಾಮಕೃಷ್ಣ ಸೀಬಿನಕೆರೆ, ತೀರ್ಥಹಳ್ಳಿ





## ಮರಕ್ಕೆ ಸಂಕಷ್ಟವೇ

ಪ್ರಕೃತಿ ಸಕಲ ಜೀವ ಸಂಕುಲಗಳಿಗೆ ಆಧಾರ. ಮಾನವ ತನ್ನ ಅನುಕೂಲಕ್ಕಾಗಿ ಪ್ರಕೃತಿ ವಿನಾಶ ಹಾಗೂ ದಬ್ಬಾಳಿಕೆಯನ್ನು ನಡೆಸುತ್ತಾ ಜೀವಸಂಕುಲಗಳಿಗೆ ಮಾರಕವಾಗಿದ್ದು ಎಲ್ಲರಿಗೂ ತಿಳಿದ ವಿಷಯ.

ಇತ್ತೀಚೆಗೆ ಹವಾಮಾನದ ವೈಪರೀತ್ಯದಿಂದಾಗಿ ಕೊಪ್ಪಳ– ಹಾವೇರಿ ಜಿಲ್ಲೆಯ ವ್ಯಾಪ್ತಿಯ ಕೃಷಿ ಹೊಲ, ಗದ್ದೆಗಳಲ್ಲಿ ಮನೆಯ ಅಂಗಳದಲ್ಲಿ ದೇವಸ್ಥಾನದ ಮುಂಭಾಗದಲ್ಲಿರುವ ಬೇವಿನ ಮರಗಳು ಒಣಗುತ್ತಿದ್ದು ಪರಿಸರ ಪ್ರೇಮಿಗಳಿಗೆ ಸಂಕಷ್ಟಕ್ಕೆ ಇಡುಮಾಡಿದೆ. ಇದು ಕೂಡ ಮಾನವನಿಗಂಟುವ ಸಾಂಕ್ರಾಮಿಕ ಕಾಯಿಲೆಯಂತೆ ಗಿಡದಿಂದ ಗಿಡಕ್ಕೆ ಹಬ್ಬುತ್ತಿರಬಹುದೇ ಎನ್ನುವ ಅನುಮಾನ. ವಿಷಯ ತಜ್ಞರು ಈ ಬಗ್ಗೆ ಗಮನಹರಿಸುವ ಅಗತ್ಯ ಇದೆ ಎಂದೆನಿಸುತ್ತದೆ. ಬೇವಿನ ಮರಗಳು ಈ ಕಾಲಕ್ಕೆ ಚಿಗುರಿ ಹೂ ಬಿಟ್ಟು ಯುಗಾದಿಯ ಬೇವು ಬೆಲ್ಲಕ್ಕೆ ಅಣಿಯಾಗುತ್ತಿದ್ದವು ಆದರೆ ಈಗ ಒಣಗುತ್ತಿರುವುದು ದುರ್ದೈವವೇ ಸರಿ. ಊರಿನ ಮುಂದಿನ ಕಟ್ಟೆಗಳಲ್ಲಿ, ದೇವಸ್ಥಾನದ ಮುಂಭಾಗದಲ್ಲಿ ಹರಟೆ ಹೊಡೆಯುತ್ತಿದ್ದ ಯುವಕರಿಗೆ, ದಾರಿ ಹೋಕರಿಗೆ ದಣಿವು ತಣಿಸುತ್ತಿದ್ದ ಬೇವಿನ ಮರಗಳು ಸಂಪೂರ್ಣ ಒಣಗಿವೆ.

—ಮೈಲಾರಪ್ಪ ಬೂದಿಹಾಳ ಮುಗಿಲಹಕ್ಕಿ

## ಹಸಿರು ಕಪ್ಪೆ

ಅಪರೂಪದ ಹಸಿರು ಕಪ್ಪೆ. ಪ್ರಕಾಶಮಾನವಾದ ವರ್ಣ. ಹೈಲಾಸೆರಿಯಾ ವರ್ಗಕ್ಕೆ ಸೇರಿದೆ. ಗರಿಷ್ಠ ಎರಡೂವರೆ ಇಂಚು ಉದ್ದವಾಗುತ್ತದೆ. ಜಲವಾಸಿಯಲ್ಲ, ಜವುಗು ಪ್ರದೇಶದ ಮರಗಳ ಮೇಲೆಯೇ ವಾಸ. ಮರದ ಎಲೆಗಳ ನಡುವೆ ಕುಳಿತು ಅದು ಕೀಟಗಳನ್ನು ಹಿಡಿದು ತಿಂದು ಬದುಕುವಾಗಲೂ ಈ ಹಸಿರು ವರ್ಣ ಪರಭಕ್ಷಕಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತದೆ. ಮರದ ಕಪ್ಪೆ ಯಾಕೋ ಇತ್ತೀಚೆಗೆ ನಮ್ಮ ಮನೆಯೊಳಗೆ ಬಂದಿತ್ತು.

—ಪ. ರಾಮಕೃಷ್ಣಶಾಸ್ತ್ರಿ

